
# ಭಕ್ತನ ವೇಷದಲ್ಲಿ ಭಗವಂತ


ಕಥೆ: ನೀಲಮಣಿ


ಚಿತ್ರ: ಶಂಕರ್

ಸೇನಾನಾವಿ ಎಂಬುವವನು ಒಬ್ಬ ರಾಜನ ಕ್ಷೌರಿಕನಾಗಿದ್ದ. ಅವನು ವಿಷ್ಣುವಿನ ಮಹಾಭಕ್ತನಾಗಿದ್ದ. ಪ್ರತಿದಿನ ಬೆಳಿಗ್ಗೆ ದೇವರ ಪೂಜೆಯನ್ನು ತುಂಬಾ ನಿಷ್ಠೆಯಿಂದ ಮಾಡುತ್ತಿದ್ದ. ಅದು ಮುಗಿಸಿದ ನಂತರವೇ ಅರಮನೆಗೆ ಕ್ಷೌರದ ಕೆಲಸಕ್ಕೆ ಹೋಗುತ್ತಿದ್ದ. ಒಂದು ದಿನ ಪೂಜೆಯಲ್ಲಿ ತನ್ನನ್ನು ತಾನು ಮರೆತ. ಸಮಯದ ಪರಿವೇ ಅವನಿಗಿರಲಿಲ್ಲ. ಅರಮನೆಗೆ ತಡವಾಗಿ ಹೋಗಿ ರಾಜನ ಕೋಪಕ್ಕೆ ಗುರಿಯಾಗುವನಲ್ಲಾ ಎಂದು ಅವನ ಹೆಂಡತಿ ತುಂಬಾ ಚಿಂತೆಗೀಡಾದಳು. ಆದರೆ ಪೂಜೆಯ ಮಧ್ಯದಲ್ಲಿ ಅವನಿಗೆ ತೊಂದರೆ ಕೊಡಲು ಅವಳಿಗೆ ಧೈರ್ಯವಾಗಲಿಲ್ಲ.




ಅವಳು ಊಹಿಸಿದಂತೆ ರಾಜನು ಕೋಪಗೊಂಡು, ಅವನನ್ನು ಕರೆತರಲು ತನ್ನ ಸೈನಿಕರನ್ನು ಕಳುಹಿಸಿದ.





ಅಸೂಯೆಯಿಂದಿದ್ದ ಅಕ್ಕಪಕ್ಕದ ಮನೆಯವರು, ಸಿಪಾಯಿಯ ಕೋಪದ ಬೆಂಕಿಗೆ ಮತ್ತಷ್ಟು ತುಪ್ಪ ಸುರಿದರು.




ಅತ್ತ ಅರಮನೆಯಲ್ಲಿ ರಾಜನು ಕಾಯುತ್ತಿದ್ದನು.
ಓ! ಅವನು ಪೂಜೆಯಲ್ಲಿದ್ದಾನೋ! ನನ್ನ ಆಜ್ಞೆ ಮೀರಲು ಅವನಿಗೆಷ್ಟು ಧೈರ್ಯ! ತಕ್ಷಣ ಅವನನ್ನು ಬಂಧಿಸಿ ಇಲ್ಲಿಗೆ ಎಳೆದು ತನ್ನಿ.
5
ಇದೊಂದನ್ನೂ ತಿಳಿಯದೆ ಸೇನಾನಾವಿ, ತನ್ನ ಪಾಡಿಗೆ ತಾನು ಪೂಜೆಯಲ್ಲಿ ಮುಳುಗಿದ್ದನು. ಅವನ ಭಕ್ತಿಯಿಂದ ಪ್ರಸನ್ನನಾದ ಭಗವಂತನು, ತನ್ನ ಭಕ್ತನನ್ನು ಕಾಪಾಡಲು ತಾನೇ ಸೇನಾನಾವಿಯ ರೂಪದಲ್ಲಿ ಒಂದು ಚೀಲ ಹಿಡಿದುಕೊಂಡು ಅರಮನೆಯತ್ತ ಬರಲಾರಂಭಿಸಿದನು.
ಸೇನಾನಾವಿ ಅಲ್ಲಿ ಬರುತ್ತಿದ್ದಾನೆ. ಅವನನ್ನು ಬಂಧಿಸಿ ರಾಜನ ಬಳಿಗೆ ಕರೆದೊಯ್ಯೋಣ.
6
ಬಂಧಿತನಾಗಿದ್ದ ಸೇನಾನಾವಿಯನ್ನು ನೋಡುತ್ತಿದ್ದಂತೆಯೇ ಏಕೋ ಏನೋ ರಾಜನ ಕೋಪ ಕುಗ್ಗಿತ್ತು.
ಅವನನ್ನು ಬಿಡುಗಡೆ ಮಾಡಿ, ನನಗೆ ಕ್ಷೌರ ಮಾಡಲಿ, ಹಾಗೂ ಅಂಗಮರ್ದನ ಮಾಡಲಿ.
ಅಂದು ಅವನ ಕೈಯಲ್ಲಿ ಅಂಗಮರ್ದನ ಮಾಡಿಸಿಕೊಳ್ಳುವಾಗ ರಾಜನಿಗೆ ತುಂಬಾ ಹಿತವೆನಿಸಿತು. ಥಟ್ಟನೆ ರಾಜನು ಎಣ್ಣೆಯ ಬಟ್ಟಲಿನಲ್ಲಿ ಸೇನಾನಾವಿಯ ಪ್ರತಿಬಿಂಬವನ್ನು ಕಂಡನು.
8
ಏನಾಶ್ಚರ್ಯ! ನಾನು ಸೇನಾನಾವಿಯ ಪ್ರತಿಬಿಂಬಕ್ಕೆ ಬದಲಾಗಿ ಮಹಾವಿಷ್ಣು ವನ್ನು ಕಾಣುತ್ತಿದ್ದೇನಲ್ಲಾ!
ಸೇನಾನಾವಿ, ಇಂದು ನಿನ್ನಿಂದ ತುಂಬಾ ತೃಪ್ತನಾಗಿರುವೆ. ನೀನು ಏಕೆ ಮನೆಗೆ ಹೋಗಬೇಕು? ಅರಮನೆಯಲ್ಲಿ ಏಕೆ ಶಾಶ್ವತವಾಗಿ ಇರಬಾರದು?
ಮಹಾರಾಜ! ತಾವು ನನ್ನ ಮೇಲೆ ಕೋಪಗೊಳ್ಳದೆ ಇರುವುದರಿಂದ ನನಗೆ ತುಂಬಾ ಸಂತೋಷವಾಗಿದೆ. ನಾನು ಇಲ್ಲೇ ನಿಂತರೆ ನನ್ನ ಇತರ ಕೆಲಸಗಳಿಗೆ ತೊಂದರೆಯಾಗುತ್ತದೆ. ತಾವು ನನಗೆ ಯಾವಾಗ ಆಜ್ಞೆ ಮಾಡಿದರೂ ಓಡಿ ಬರುತ್ತೇನೆ.
9


ರಾಜನು ಅವನಿಗೆ ಬಂಗಾರದ ನಾಣ್ಯಗಳ ಒಂದು ಚೀಲವನ್ನು ಉಡುಗೊರೆಯಾಗಿ ಕೊಟ್ಟನು.
10
ಈಗಲೇ ಹೋಗಬೇಡ. ನನ್ನ ಸ್ನಾನ ಮುಗಿಯುವವರೆಗೆ ಕಾದಿರು.
ಅತ್ತ, ಸೇನಾನಾವಿ ತನ್ನ ಮನೆಯಲ್ಲಿ ಇನ್ನೂ ಗಾಢವಾದ ಧ್ಯಾನದಲ್ಲೇ ಕುಳಿತಿದ್ದ. ಅವನು ಒಮ್ಮೆಯೂ ತನ್ನ ಕಣ್ಣುಗಳನ್ನು ತೆರೆಯಲಿಲ್ಲ.
11
ಸೇನಾನಾವಿಯ ವೇಷದಲ್ಲಿದ್ದ ಭಗವಂತ ನಿಶ್ಶಬ್ದವಾಗಿ ಅವನ ಮನೆಗೆ ಬಂದು, ಆ ಚಿನ್ನದ ನಾಣ್ಯಗಳಿದ್ದ ಚೀಲವನ್ನು ಅವನ ಮನೆಯಲ್ಲಿಟ್ಟು ಅದೃಶ್ಯನಾದ.
12
ಮಹಾರಾಜ ಸ್ನಾನ ಮುಗಿಸಿ ಬಂದಾಗ ಸೇನಾನಾವಿ ಅಲ್ಲಿರಲಿಲ್ಲ.
13
ಯಾರಲ್ಲಿ? ಸೇನಾನಾವಿ ಎಲ್ಲಿ ಹೋದ? ಅವನನ್ನು ತಕ್ಷಣ ಕರೆದುಕೊಂಡು ಬನ್ನಿ.
ಸೇವಕ ಸೇನಾನಾವಿಯ ಮನೆಗೆ ಓಡಿ ಬಂದು ಅವನನ್ನು ಕರೆದ. ಸೇನಾನಾವಿ ನಿಧಾನವಾಗಿ ಕಣ್ಣು ತೆರೆದ.
ಅಯ್ಯೋ, ಮಹಾರಾಜ ಮತ್ತೆ ಮತ್ತೆ ಸೈನಿಕರನ್ನು ಕಳುಹಿಸು ತ್ತಿದ್ದಾರೆ. ಬೇಗ ಹೊರಡಿ.
ಓ, ಸಮಯವೇ ಗೊತ್ತಾಗಲಿಲ್ಲ. ಈಗಲೇ ಹೊರಡುತ್ತೇನೆ.
14


ಸೇನಾನಾವಿ ಕ್ಷೌರದ ಪೆಟ್ಟಿಗೆಯನ್ನು ತೆಗೆದುಕೊಂಡು ಅವಸರ ಅವಸರವಾಗಿ ಸೇವಕನ ಹಿಂದೆ ಓಡಿದ.
ರಾಜರು ತುಂಬಾ ಕೋಪದಿಂದ್ದಾರೆಯೆ? ನನಗೆ ತುಂಬಾ ಭಯವಾಗುತ್ತಿದೆ.
15
ಸೇನಾನಾವಿಯನ್ನು ಮಹಾರಾಜ ಓಡಿ ಬಂದು ಆಲಿಂಗಿಸಿಕೊಂಡ.
ನೀನು ಏಕೆ ಹೊರಟು ಹೋದೆ? ನಿನ್ನ ಪ್ರತಿಬಿಂಬವನ್ನು ನಾನು ಮತ್ತೆ ಎಣ್ಣೆಯ ಬಟ್ಟಲಿನಲ್ಲಿ ನೋಡಬೇಕು.
16
ಪ್ರಭು, ತಾವು ಏನು ಹೇಳುತ್ತಿದ್ದೀರಿ? ನಾನು ಪೂಜೆ ಮುಗಿಸಿ ಈಗ ತಾನೇ ಬರುತ್ತಿದ್ದೇನೆ.
ಹಾಗಿದ್ದಲ್ಲಿ ಸ್ವಲ್ಪ ಹೊತ್ತಿನ ಮುಂಚೆ ನಿನ್ನ ವೇಷದಲ್ಲಿ ಕ್ಷೌರ ಮಾಡಿದವರು ಯಾರು? ನನ್ನ ದೇಹಕ್ಕೆಲ್ಲಾ ಎಣ್ಣೆ ಹಚ್ಚಲಿಲ್ಲವೇ ನೀನು?
17
ಸೇನಾನಾವಿ ಭಯದಿಂದ ನಡುಗುತ್ತಾ ನಿಂತ. ಮಹಾರಾಜ ಸೇನಾನಾವಿಯ ಕಾಲಿಗೆ ಬಿದ್ದು ನಮಸ್ಕರಿಸಿದ.
ಓ ಭಕ್ತಶ್ರೇಷ್ಠ! ನನ್ನೆಲ್ಲಾ ಅವಿವೇಕವನ್ನು ಕ್ಷಮಿಸಿ ಬಿಡು.
18
ಹರಿ ನಾರಾಯಣ! ಹರಿ ನಾರಾಯಣ! ಕ್ಷಮಿಸಲು ನಾನು ಯಾರು?
ಸೇನಾನಾವಿ ಮನೆಗೆ ಹಿಂತಿರುಗಿದ. ಅಲ್ಲಿದ್ದ ಚಿನ್ನದ ನಾಣ್ಯಗಳನ್ನು ನೋಡಿ ಆಶ್ಚರ್ಯಗೊಂಡ.
ಈಗ ಎಲ್ಲಾ ಅರ್ಥವಾಗುತ್ತಿದೆ. ನನ್ನನ್ನು ರಾಜನ ಕೋಪದಿಂದ ಕಾಪಾಡಲು ಭಗವಂತನೇ ನನ್ನ ವೇಷದಲ್ಲಿ ರಾಜನ ಬಳಿಗೆ ಹೋಗಿದ್ದಾನೆ. ರಾಜನು ಕೊಟ್ಟ ಚಿನ್ನದ ನಾಣ್ಯಗಳನ್ನು ನನ್ನ ಮನೆಯಲ್ಲಿಟ್ಟು ಹೋಗಿದ್ದಾನೆ. ಓ ದಯಾಮಯನೇ! ರಾಜನಿಗೆ ಕೊಟ್ಟಂತೆ ನನಗೂ ನಿನ್ನ ದರ್ಶನವನ್ನು ಕೊಡಬಾರದೆ?
19